**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರಮೇಶ್ ಬಾಬು (ನಾಮ ನಿರ್ದೇಶಿತರು) ಇವರು ನಿಯಮ -72ರ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಬಗ್ಗೆ.**

**ಪ್ರಶ್ನೆ:**

ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ ಅಡಿಯಲ್ಲಿ ಇಲ್ಲಿಯವರೆಗೆ ಕರ್ನಾಟಕದಲ್ಲಿ ಸುಮಾರು 80 ಲಕ್ಷ ಶ್ರೀಗಂಧ ಸಸಿಗಳನ್ನು ವಿತರಿಸಲಾಗಿದೆ. ರಾಜ್ಯದಲ್ಲಿ ಸುಮಾರು 10000 ಹೆಕ್ಟರ್ ಪ್ರದೇಶದಲ್ಲಿ ಶ್ರೀಗಂಧದ ಕೃಷಿ ಮಾಡಿರುವ ಮಾಹಿತಿ ಇರುತ್ತದೆ. ಶ್ರೀಗಂಧ ಬೆಳೆದ ನಂತರ ಅದಕ್ಕೆ ಸೂಕ್ತವಾದ ಮಾರುಕಟ್ಟೆ ಒದಗಿಸುವುದು ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಇದಕ್ಕೆ ಮಾರುಕಟ್ಟೆ ಒದಗಿಸುವುದು ಸರ್ಕಾರದ ಕರ್ತವ್ಯ ಆಗಿರುತ್ತದೆ. ಶ್ರೀಗಂಧಕ್ಕೆ ಅಂತರಾಷ್ಟ್ರೀಯ ಖ್ಯಾತಿ ಇದ್ದು, ವಿಶೇಷವಾಗಿ ಭಾರತದಲ್ಲಿ ಕರ್ನಾಟಕದಲ್ಲಿ ಅತಿ ಹೆಚ್ಚು ಶ್ರೀಗಂಧ ಬೆಳೆಯನ್ನು ತೆಗೆಯಲಾಗುತ್ತಿದೆ. ಇದಕ್ಕೆ ಸೂಕ್ತ ಮಾರುಕಟ್ಟೆ ಒದಗಿಸಿದಲ್ಲಿ ರಾಜ್ಯದ ಶ್ರೀಗಂಧ ಬೆಳೆಗೆ ಒತ್ತು ನೀಡಿದಂತಾಗುತ್ತದೆ. ಇದಕ್ಕೆ ಪೂರಕವಾಗಿ ಅರಣ್ಯ ಇಲಾಖೆಯ ನಿಯಮಗಳಲ್ಲಿ ಬದಲಾವಣೆ ಆಗಬೇಕಾಗಿದೆ. ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಶ್ರೀಗಂಧಕ್ಕೆ ಬೇಡಿಕೆ ಇದ್ದು ರಾಜ್ಯ ಸರ್ಕಾರ ಶ್ರೀಗಂಧದ ಬೆಳೆಗೆ ಪ್ರೋತ್ಸಾಹ ನೀಡಿದಲ್ಲಿ ಇದನ್ನು ರಫ್ತು ಮಾಡಲು ಅನುಕೂಲವಾಗುತ್ತದೆ ಮತ್ತು ರಾಜ್ಯದಲ್ಲಿ ಹೆಚ್ಚು ಹೆಚ್ಚು ಶ್ರೀಗಂಧ ಬೆಳೆಯಲು ಅನುಕೂಲವಾಗುತ್ತದೆ. ಶ್ರೀಗಂಧದ ಸಸಿಗಳನ್ನು ವಿತರಣೆ ಮಾಡಿ ರಾಜ್ಯ ಸರ್ಕಾರ ಕೈ ತೊಳೆದುಕೊಳ್ಳಲು ಸಾಧ್ಯ ಇರುವುದಿಲ್ಲ. ಸೂಕ್ತವಾದ ಮಾರ್ಗದರ್ಶನ ಮತ್ತು ರೈತರಿಗೆ ಮಾರುಕಟ್ಟೆಯ ಸೌಕರ್ಯಗಳನ್ನು ಒದಗಿಸಿದಲ್ಲಿ ಇದರಿಂದ ಆರ್ಥಿಕವಾಗಿ ರಾಜ್ಯ ಸದೃಢಗೊಳ್ಳಲಿದೆ. ಅನುಮತಿ ಪಡೆದು ಬೆಳೆ ತೆಗೆದಂತಹ ರೈತರು ನೇರವಾಗಿ ಶ್ರೀಗಂಧವನ್ನು ಮಾರಾಟ ಮಾಡಲು ಕಾನೂನಿನ ಸರಳೀಕರಣ ಮಾಡುವುದು ಅವಶ್ಯಕವಾಗಿರುತ್ತದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ರೈತರಿಗೆ ಪೂರಕವಾಗಿ ನಿಯಮಾವಳಿ ರಚಿಸಲು, ಅಂತರರಾಷ್ಟ್ರೀಯ ಮಾರುಕಟ್ಟೆ ಒದಗಿಸಲು ಮತ್ತು ಶ್ರೀಗಂಧ ಬೆಳೆಗೆ ಪ್ರೋತ್ಸಾಹ ನೀಡುವ ಬಗ್ಗೆ.

**ಉತ್ತರ**:

ಕರ್ನಾಟಕ ಅರಣ್ಯ ಕಾಯ್ದೆ, 1963ರ ಕಲಂ 2(7)(ಎ)ರನ್ವಯ ಶ್ರೀಗಂಧ ಮರ ಮತ್ತು ಅದರ ಉತ್ಪನ್ನಗಳು 'ಅರಣ್ಯೋತ್ಪನ್ನ' ಗಳಾಗಿದ್ದು, ಅವುಗಳಿಗೆ ಸಂಬಂಧಿಸಿದ ಸದರಿ ಕಾಯ್ದೆಯ ಕಲಂಗಳನ್ನು ಮತ್ತು ಕರ್ನಾಟಕ ಅರಣ್ಯ ನಿಯಮಾವಳಿ, 1969ರ ನಿಯಮಗಳನ್ನು ಅಗತ್ಯತೆಗೆ ಅನುಗುಣವಾಗಿ ಕಾಲಕಾಲಕ್ಕೆ ಸಾರ್ವಜನಿಕ ಹಿತದೃಷ್ಟಿಯಿಂದ ಪರಿಷ್ಕರಿಸಲಾಗುತ್ತಿದೆ. ಈ ಹಿಂದೆ ಎಲ್ಲಾ ಜಮೀನುಗಳಲ್ಲಿ (ಖಾಸಗಿ ಜಮೀನುಗಳು ಸೇರಿದಂತೆ) ಬೆಳೆದಿರುವ ಶ್ರೀಗಂಧ ಮರಗಳು ಸರ್ಕಾರದ ಸಂಪತ್ತಾಗಿದ್ದು, 2001ನೇ ಸಾಲಿನಲ್ಲಿ ತಿದ್ದುಪಡಿಸಿದ ಕಲಂ 83ರನ್ವಯ ಭೂಮಾಲೀಕರು ತಮ್ಮ ಸ್ವಂತ ಜಮೀನಿನಲ್ಲಿ ಬೆಳೆಸಿರುವ ಅಥವಾ ಬೆಳೆದಿರುವ (ಸರ್ಕಾರದ ಮಾಲೀಕತ್ವದಲ್ಲಿರುವ ಶ್ರೀಗಂಧ ಮರಗಳನ್ನು ಹೊರತುಪಡಿಸಿ) ಶ್ರೀಗಂಧ ಮರಗಳ ಮಾಲೀಕತ್ವವನ್ನು ಹೊಂದಿರುತ್ತಾರೆ. ಅದರಂತೆ ಸ್ವಂತ ಜಮೀನಿನಲ್ಲಿ ಬೆಳೆಸಿರುವ/ಬೆಳೆದಿರುವ ಶ್ರೀಗಂಧ ಮರಗಳು ಭೂಮಾಲೀಕರ ಖಾಸಗಿ ಸ್ವತ್ತು ಆಗಿರುತ್ತದೆ. ಸದರಿ ಕಾಯ್ದೆಯ ಕಲಂ 85ರಂತೆ ಶ್ರೀಗಂಧ ಮರಗಳ ರಕ್ಷಣೆ/ಸಂರಕ್ಷಣೆಗ ಸಂಬಂಧಿಸಿದ ಭೂಮಾಲೀಕರು ಜವಾಬ್ದಾರರಾಗಿರುತ್ತಾರೆ.

ಮುಂದುವರೆದು, ಸದರಿ ಕಾಯ್ದೆಯ ಕಲಂ 87 ರಂತೆ ಶ್ರೀಗಂಧ ಮರದ ತುಂಡುಗಳು ಅಥವಾ ಸಂಬಂಧಿಸಿದ ಶ್ರೀಗಂಧ ಉತ್ಪನ್ನಗಳನ್ನು ಶೇಖರಣೆ ಮಾಡಲು ಅರಣ್ಯ ಇಲಾಖೆಯಿಂದ ಪರವಾನಗಿ ಪಡೆಯಬೇಕಾಗಿರುತ್ತದೆ. ನಿಯಮಾನುಸಾರ ಅನುಮತಿ ಪಡೆದು ಶ್ರೀಗಂಧ ಮರಗಳನ್ನು ತೆಗೆದಂತಹ ಸದರಿ ಮರಗಳಿಂದ ಲಭ್ಯವಾದ ಶ್ರೀಗಂಧವನ್ನು ಸಂಬಂಧಿಸಿದ ಭೂಮಾಲೀಕರು ನೇರವಾಗಿ ಮಾರಾಟ ಮಾಡುವ ಸಲುವಾಗಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಇಇ 31 ಎಫ್‌ಎಸ್‌ಡಬ್ಲ್ಯೂ 2008

ದಿನಾಂಕ 11.07.2008ರನ್ವಯ ಹಾಗೂ ತದನಂತರ ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 46 ಎಫ್‌ಡಿಪಿ 2022 ದಿನಾಂಕ 31.12.2022ರಲ್ಲಿ ಕರ್ನಾಟಕ ಅರಣ್ಯ ನಿಯಮಾವಳಿ, 1969ರ ನಿಯಮ 108(1)ಕ್ಕೆ ಮಾಡಿರುವ ತಿದ್ದುಪಡಿರನ್ವಯ ಶ್ರೀಗಂಧ ಬೆಳೆದ ಭೂಮಾಲೀಕರು ಈ ಕೆಳಗಿನಂತೆ ಯಾರಿಗಾದರೂ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.

i. ಅರಣ್ಯ ಇಲಾಖೆಯಲ್ಲಿನ ಸರ್ಕಾರಿ ಶ್ರೀಗಂಧದ ಕೋಠಿಗಳಿಗೆ;

ii. ರಾಜ್ಯ ಸರ್ಕಾರವು ಕಾಲ ಕಾಲಕ್ಕೆ ಅಧಿಸೂಚಿಸಿದ ಸಂಸ್ಥೆಗಳಿಗೆ [ಪ್ರಸ್ತುತ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ (Karnataka State Handicrafts Development Corporation Limited) / ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ (Karnataka Soaps and Detergents Limited)];

iii. ಇತರೆ ಯಾವುದೇ ಸಂಸ್ಥೆಗೆ (any other entity).

ಭೂಮಾಲೀಕರು ತಮ್ಮ ಸ್ವಂತ ಜಮೀನಿನಲ್ಲಿ ಬೆಳೆಸಿರುವ ಶ್ರೀಗಂಧ ಮರಗಳು ಇತರೆ ಜಾತಿಯ ಮರಗಳಂತೆ ಪೂರ್ಣವಾಗಿ ಖಾಸಗಿ ಸ್ವತ್ತು ಆಗಿದ್ದು, ನಿಯಮಾನುಸಾರ ಕತ್ತಾವಣೆ ಮಾಡಿದ ಶ್ರೀಗಂಧ ಮರಗಳನ್ನು ಸರ್ಕಾರ ಸಂಸ್ಥೆಗಳಲ್ಲದೇ ಇತರ ಯಾವುದೇ ಸಂಸ್ಥೆಗೆ (any other entity) ಮಾರಾಟ ಮಾಡಲು ಸರ್ಕಾರವು ಈಗಾಗಲೇ ಅವಕಾಶವನ್ನು ಕಲ್ಪಿಸಿರುವುದರಿಂದ ಶ್ರೀಗಂಧವನ್ನು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿಯೂ ಸಹ ನೇರವಾಗಿ ಅಥವಾ ಯಾವುದೇ ಸಂಸ್ಥೆಯ ಮೂಲಕ ನಿಯಮಾನುಸಾರ ಮಾರಾಟ ಮಾಡಲು ಅವಕಾಶವಿರುತ್ತದೆ. ಈ ಪ್ರಕ್ರಿಯಯಲ್ಲಿ ಅರಣ್ಯ ಇಲಾಖೆಯ ಕಾಯ್ದೆ/ನಿಯಮಗಳಿಂದ ಯಾವುದೇ ನಿರ್ಬಂಧವಿರುವುದಿಲ್ಲ.

**ಕಡತ ಸಂಖ್ಯೆ: ಅಪಜೀ 23 ಎಫ್‌ಎಸ್‌ಡಬ್ಲ್ಯೂ 2026**

**(ಈಶ್ವರ ಬಿ. ಖಂಡ್ರೆ)**
ಅರಣ್ಯ, ಜೀವ ಪರಿಸ್ಥಿತಿ ಮತ್ತು ಪರಿಸರ ಸಚಿವರು